ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ

ಸಿಸಿ ಃ 781/2022

ಡಿ.ಡಬ್ಲ್ಯು –1

ಸಾಕ್ಷಿದಾರರ ಹೆಸರುಃ ವೈ.ಎಸ್.ನಾಗಮಣಿ
ತಂದೆ/ಗಂಡ ಹೆಸರುಃ ಶಾಂತಮಲ್ಲಪ್ಪ
ವಯಸ್ಸುಃ 53
ವೃತ್ತಿಃ ಅಂಗವಾಡಿ ಕಾರ್ಯಕರ್ತೆ
ವಾಸಸ್ಥಳಃ ಕೂಗೆಕೋಡಿ ಗ್ರಾಮ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 13-06-2024

ಮುಖ್ಯ ವಿಚಾರಣೆಃ ಶ್ರೀ. ಜೆ.ಕೆ ವಕೀಲರಿಂದ

ಈ ಪ್ರಕರಣವನ್ನು ಎನ್.ಎಸ್.ಜಯರಾಂ ರವರು ದಾಖಲು ಮಾಡಿರುತ್ತಾರೆ. ಎನ್.ಎಸ್.ಜಯರಾಂ ರವರು ಪಿಗ್ಮಿ ವಸೂಲಾತಿ ಮತ್ತು ಫೈನಾನ್ ಮತ್ತು ಚೀಟಿ ವ್ಯವಹಾರ ಮಾಡುತ್ತಾರೆ. ಅವರ ಕಚೇರಿಯ ಹೆಸರು ಬಾಲಾಜಿ ಫೈನಾನ್ಸ್ ಇರುತ್ತದೆ. ನಾನು ಅವರಲ್ಲಿ ಪಿಗ್ಮಿ ಹಣ ಕಟ್ಟುತ್ತಿದ್ದೆ. 2018 ರಲ್ಲಿ 2 ಲಕ್ಷ ಹಣವನ್ನು ಫಿರ್ಯಾದಿಯಿಂದ ಸಾಲ ಪಡೆದಿದ್ದೆ. ಆ ಸಮಯದಲ್ಲಿ ಭದ್ರತೆಗಾಗಿ ನನ್ನ ಮತ್ತು ನನ್ನ ಪತಿಯ ಎರಡು ಚೆಕ್ಕುಗಳನ್ನು ಕೊಟ್ಟಿದ್ದೆ. ನನ್ನ ಎಸ್.ಬಿ.ಐ ಸೋಮವಾರಪೇಟೆಯ ಚೆಕ್ ಕೊಟ್ಟಿದ್ದೆ. ನಾನು ಮೂರುವರೆ ಲಕ್ಷದ ಚೀಟಿ ಕಟ್ಟುತ್ತಿದ್ದೆ. ಸದರಿ ಚೀಟಿಯನ್ನು ನಾನು ಕೂಗಿರುತ್ತೇನೆ. ಶೇಕಡ 30 ರಷ್ಟು ಹಿಡಿದು 2,90,000/- ಹಣ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನನ್ನ ಮತ್ತು ನನ್ನ ಗಂಡನ ಎರಡೆರಡು ಚೆಕ್ಕುಗಳನ್ನು ಕೊಟ್ಟಿದ್ದೆ. ಪಿಗ್ಮಿ ಹಣ 1,32,000/- ಪಾವತಿಸಿರುತ್ತೇನೆ, ಚೀಟಿ ಹಣ 2,80,000/- ಪಾವತಿಸಿರುತ್ತೇನೆ. ಅವರಿಗೆ 98,000/- ಬಾಕಿ ಇರುತ್ತದೆ. ಪಿಗ್ಮಿ ಹಣ ಮರು ಪಾವತಿ ಮಾಡಿರುವ ಬಗ್ಗೆ ಮತ್ತು ಚೀಟಿ ಹಣವನ್ನು ಮರು ಪಾವತಿ ಮಾಡಿರುವ ಬಗ್ಗೆ ನಾನು ಫಿರ್ಯಾದಿ ನೀಡಿದ ನೋಟಿಸಿಗೆ ನಿಪಿ 7 ರಂತೆ ಉತ್ತರ ನೀಡಿರುತ್ತೇನೆ.

ನಾನು ಜೂನ್ 2022 ರಂದು ಫಿರ್ಯಾದಿಯಿಂದಯಾವುದೇ ಸಾಲ ಪಡೆದಿರುವುದಿಲ್ಲ. ಆ ಹಣದ ಮರು ಪಾವತಿಗೆ ನಿಪಿ 2 ಚೆಕ್ಕುನ್ನು ಕೊಟ್ಟಿರುವುದಿಲ್ಲ. ನಿಪಿ 2 ನನ್ನ ಖಾತೆಗೆ ಸೇರಿದ ಚೆಕ್ಕಾಗಿರುತ್ತದೆ. ನಿಪಿ 2 ನ್ನು ಪಿಗ್ಮಿ ಹಣ ಪಡೆಯುವಾಗ ಭದ್ರತೆಗಾಗಿ ಕೊಟ್ಟಿದ್ದೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಸಹಿ/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ